What was under discussion was the Demands as elucidated in the Budget and those Demands have been perfectly discussed. But that cannot be mixed up with other things about properties. Any insinuation about character or inconsistency in the statement about property can be raised in a separate way as per the Rules of Procedure.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ವಿರೋಧ ಪಕ್ಷದ ಸದಸ್ಯರು ಸಭೆಯಲ್ಲಿ ಒಂದು ಗುರುತರವಾದ ಆಪಾದನೆಯನ್ನು ಮಾಡಿದಾಗ ಅವರು ಸಭೆಯಲ್ಲಿ ಇರಬೇಕಾಗಿತ್ತು...

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಮುಖ್ಯ ಮಂತ್ರಿಗಳು ಕಳೆದ 3-4 ದಿನಗಳಿಂದ ಈ ಸಭೆಗೇ ಬರುತ್ತಿಲ್ಲ. ಅವರ ಪರಿಸ್ಥಿತಿ ಏನಾಗಿದೆ ? ಅವರು ಸಭೆಗೆ ಏಕೆ ಬರುತ್ತಿಲ್ಲ ? ಅವರ ಮಂತ್ರಿ ಮಂಡಲದ ಗೊಂದಲವೇನಾಯಿತೋ...

Sri C. M. ARUMUGHAM.—Sir, we may not be interested to know what is going on in the party. But, we are definitely concerned about the Leader of the House being continuously absent for more than a week. We have got a right to know whether he is in headquarters or whether he is otherwise engaged in a more important work than attending the Assembly. If he is engaged in the Legislative Council, we can tolerate. But, he cannot be so engaged in the Council for the past 5-6 days.

Mr. DEPUTY SPEAKER.—That question has been raised again and again.

Sri C. M. ARUMUGHAM.—But there is no proper reply from the Government.

Mr. DEPUTY SPEAKER.—If necessary, the Chief Minister would definitely be here.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಬರದೆ ಇರುವುದಕ್ಕೆ ಕಾರಣವನ್ನು ತಿಳಿಸಿದರೆ ಸಾಕು.

Sri C. M. ARUMUGHAM.—It will have a reflection on the entire Cabinet.

Absence of the Chief Minister

Sri M. S. KRISHNAN.—Sir, I have given notice under Rule 312. Four days back, when the matter was raised, the reply given by the Ho'nble Speaker was that the Chief Minister is not present and that it will be answered when he comes. Everyday I have been waiting. There must be some sense of proportion. We are not treated seriously by the Chief Minister. The Chair should see that he comes to this House.

Sri C. M. ARUMUGHAM.—Sir, the House has got a right to know about the whereabouts of the Leader of the House. We Would like to know whether he is engaged in more important work than attending the Assembly. I request the Chair to direct the Government to inform us.

ಶ್ರೀ ವಾಟಾಳ್ ನಾಗರಾಜ್.—ಅವರು ಬಹಳ ಬೇಜವಾಬ್ದಾರಿಯಿಂದ ಕಳೆದ ನಾಲ್ಕು ದಿನಗಳಿಂದಲೂ ಸಭೆಗೆ ಬರುತ್ತಿಲ್ಲ. ಅವರು ಇಲ್ಲಿ ಒಂದು ಗಂಟೆ ಬಂದು ಕುಳಿತಿದ್ದು ಎದ್ದು ಹೋಗಿದ್ದರೂ ಸಾಕಾಗಿತ್ತು. ಹಾಗಿರುವಾಗ ಅವರೇಕೆ ಬರಬಿಲ್ಲ ?

Sri H. M. CHANNABASAPPA.—Sir, the House is aware that the Chief Minister has to visit Delhi on the 29th to discuss about Cauvery waters, which is a very complicated and important issue.

Sri M. S. KRISHNAN.—Sir, in this connection, I want a clarification. This morning the Hon'ble Speaker said that the issue about Cauvery waters will be taken up in the evening.

Mr. DEPUTY SPEAKER.—I will have to think of other ways if members interrupt like this.

Sri H. M. CHANNABASAPPA.—Hon. member Sri C. M. Arumugham wanted to know whether the Chief Minister is engaged himself in a more important work than the work of the Legislative Assembly. I am sure you will all concede that the Cauvery waters issue is a very important issue. This morning I was also engaged in that issue. But the responsibility of the Chief Minister is much greater because it is he who attends the Conference and prepare our case. It is not a matter which can be grasped in two minutes. He is busy studying the issue and having discussions with the concerned officers and try to involve our attitude in regard to Cauvery waters. Therefore, he could not be here. This need not be made a big issue.

ಶ್ರೀ ವಾಟಾಳ್ ನಾಗರಾಜ್.—ಅವರ ಪಾರ್ಟಿಯಲ್ಲಿ ಒಡಕುಂಟಾಗಿದೆ. ಅನೇಕ ಸದಸ್ಯರನ್ನು ಕರೆಸಿ ಮಾತನಾಡುವುದರಲ್ಲಿ ಅವರು ತಲ್ಲೀನರಾಗಿದ್ದಾರೆ. ಅವರಿಗೆ ಕಾವೇರಿ ನೀರಿಗಿಂತ ಪಾರ್ಟಿಯ ಪ್ರಶ್ನೆ ಪ್ರಬಲವಾಗಿದೆ.

Mr. DEPUTY SPEAKER.—If further obstruction is there, it will hurt me very much; I will see that it will not be recorded. The Deputy Leader has replied saying that the Chief Minister is busy in preparing the case as he has to go to Delhi. There should be a limit to such obstruction.

† ಶ್ರೀ ಬಿ. ಎ. ಕಕ್ಕಿಲಾಯ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ನಾವೀಗ ಒಂದು ಬಹಳ ಮುಖ್ಯವಾದ ಖಾತೆಯ ಬಗ್ಗೆ ಚರ್ಚೆಯನ್ನು ಆರಂಭಮಾಡುತ್ತಿದ್ದೇವೆ. ನಮ್ಮ ರಾಜ್ಯ ಪುನರ್ ನಿರ್ಮಾಣವಾದನಂತರ ನಮ್ಮ ರಾಜ್ಯಕ್ಕೆ ಸುಮಾರು 200 ಮೈಲಿಗಳ ಕರಾವಳಿ ಸೇರಿದೆ. ನಮಗೆ ಈ ಖಾನುಗಾರಿಕೆ ವ್ಯವಸಾಯದಲ್ಲಿ...

5-30 P.M.

Sri C. M. ARUMUGHAM.—I request the hon. Deputy Speaker to decide whether on account of preparing for a meeting to be attended to at Delhi, the Chief Minister should remain absent from the House for the last 4 days. When he is present in Bangalore, there cannot be more important work than attending the Assembly. I assert it. The reasons given that he could not come to the House because he is busy attending to some file and listening to the Secretaries to Government to prepare himself to attend a meeting, is not a valid reason. We resent his absent. You must direct the Chief Minister to be present in the House when he is in Bangalore. I request the Chair to give a ruling.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಸಂಬಂಧಪಟ್ಟ ವಿಷಯ ಇಲ್ಲಿ ಕಾರ್ಯಕ್ರಮ ದಲ್ಲಡ್ಡಿದ್ದರೆ ಅದೊಂದು ರೀತಿ. ಅವರಿಗೆ ಸಂಬಂಧಪಟ್ಟ ವಿಷಯ ನಿನ್ನೆ ಮೊನ್ನೆ ನಾವು ಚರ್ಚೆ ಮಾಡಿದ್ದೇವೆ.

Mr. DEPUTY SPEAKER.—May I take it that you are all organised for this? You are harping upon the same thing which Mr. Armugham pleaded.

Sri M. S. KRISHNAN.—Mr. Armugam said that the presence of the Chief Minister is absolutely essential in this House. I agree with him. I am trying to add one more aspect. Sometimes subjects pertaining to the Chief Minister have been raised times without number and every time we are told that he is not present in Bangalore; he will come tomorrow and that we have been waiting. May I know how long are we to wait for him? We have been treated with scant respect. That is why we request the presence of the Chief Minister.

ಶ್ರೀ ಕಾಗೋಡು ತಿಮ್ಮಪ್ಪ.—ಮೊನ್ನೆ ಶನಿವಾರದ ದಿನ ಅರ್ಮುಗಂರವರು ಬಿದರೆ ಮತ್ತು ಹುಮ್ನಾಬಾದುಗಳಲ್ಲಿ ಇರುವ ಡಾ. ಅಂಬೇಡ್ಕರ್‌ರವರ ಪ್ರತಿಮೆಗೆ ಜಖಂ ಮಾಡಿರುವ ವಿಚಾರ ಹೇಳಿದರು, ಅದರ ಬಗ್ಗೆ ಅದಷ್ಟು ಬೇಗ ಹೇಳಿಕೆ ಕೊಡುವುದಾಗಿ ಪಾಟೀಲರು ಹೇಳಿದರು. ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಜರೂರಾದ ವಿಷಯ ಪ್ರಸ್ತಾಪಿಸಲು ಅವರು ಹಾಜರಿರಲಿಲ್ಲ. ಸೋಮವಾರ ಮತ್ತು ಮಂಗಳವಾರ ಮುಖ್ಯಮಂತ್ರಿಗಳು ಈ ಸಭೆಗೆ ಬಂದಿಲ್ಲ ತಕ್ಷಣ ನಾವು ಪ್ರಸ್ತಾಪಿಸುವುದಕ್ಕೆ ಉತ್ತರ ಬರದಿದ್ದರೆ ಏನು ತಿಳಿಯಬೇಕು ? ಈ ಸಭೆಯಲ್ಲ ನಡೆಯುವ ಕಾರ್ಯಕಲಾಪಗಳಿಗೆ ಅಡಚಣೆ ಬರುತ್ತಿದೆ ಎಂಬ ಭಾವನೆ ಬರಬಹುದು. ನಮಗಿರುವ ಕಳಕಳಿಯನ್ನು ಮುಖ್ಯಮಂತ್ರಿಗಳಿಗೆ ತಿಳಿಸಿ ಅವರು ಬರುವಂತೆ ಮಾಡಬೇಕು. ಅವರು ಈ ಸಭೆಯಲ್ಲಿರಬೇಕಾದ ಆವಶ್ಯಕತೆಯಿದೆ ಎಂದು ಅರ್ಥಮಾಡಿಕೊಳ್ಳಬೇಕು ಎಂಬುದು ನನ್ನ ಪ್ರಾರ್ಥನೆ.

Mr. DEPUTY SPEAKER.—I have stated on innumerable occasions that no work is more important than the work in this House because this is a sovereign House. I also stated that a Minister must be present when his subject is taken up for discussion, and he cannot absent himself unless of course, he is busy with any work with the Government of India or with any foreign dignitaries visiting Bangalore. In this case what has happened is, as stated by the Hon. Deputy Leader of the House that the Chief Minister is preparing a case for representing the Cauvery waters which has been agitating our minds for so many years. In this case, I can only say that preparing a case, studying, marshalling the facts and studying it in its entirety is in the interests of the State itself so that he can represent the matter with the Government of India in an efficient manner. Therefore it cannot be said that it is the contempt of the House or the violation of any principle or rule. That is one thing.

The other matter which Sri Kagodu Thimmappa has raised is about the disfiguring of the statue of Dr. Ambedkar. I might say that I am also as sad as the other hon. members are. Dr. Ambedkar is one of the legal luminaries, most learned, and a most competent person which this country has produced and we all owe a sense of gratitude to him. We will all remember him with utmost reverence. The Statement may be made by the Government in this regard at the earliest possible hour.

ಶ್ರೀ ಕಾಗೋಡು ತಿಮ್ಮಪ್ಪ.—ವಿಷಯ ಜಾಗ್ರತೆ ನಂಗ್ರಹಿಸಿ ಉತ್ತರ ಕೊಡಬೇಕು.

ಶ್ರೀ ಎಂ. ನಂಜೇಗೌಡ.—ಪಾಯಿಂಟ್ ಆಫ್ ಆರ್ಡರ್. ಹೀಗೆ ಬೇರೆ ಬೇರೆ ವಿಷಯಗಳಿಗಾಗಿ ವಿರೋಧ ಪಕ್ಷದವರು ಹೆಚ್ಚು ಕಾಲ ಕಳೆಯುವುದರಿಂದ ನಮಗೆ ಬೇಡಿಕೆಗಳ ಮೇಲೆ ಮಾತನಾಡಲು ಅವಕಾಶವೇ ಸಿಕ್ಕುವುದಿಲ್ಲ. ನಮಗೆ ಅವಕಾಶ ಸಿಕ್ಕುವಂತೆ ಮಾಡಬೇಕು.

Mr. DEPUTY SPEAKER.—There is a force in your point of order.

ಶ್ರೀ ಕಾಗೋಡು ತಿಮ್ಮಪ್ಪ.—ಮುಖ್ಯಕಾರ್ಯದರ್ಶಿಯವರು ಅವರ ಬೇಡಿಕೆಮೇಲೆ ಮಾತನಾಡುತ್ತಾ ತಾಲ್ಲೂಕು ಬೋರ್ಡ್‌ಗಳ ಚುನಾವಣೆ ವಿಚಾರ ಈ ಅಧಿವೇಶನ ಮುಗಿಯುವುದರೊಳಗೆ ತಿಳಿಸುವುದಾಗಿ ಹೇಳಿದ್ದರು. ಸರಕಾರ ಈ ವಿಚಾರ ತೀರ್ಮಾನ ಮಾಡಿಲ್ಲ, ತಿಳಿಸುತ್ತೇನೆ ಎಂದು ಹೇಳಿದ್ದರು. ಆ ವಿಚಾರ ಏನಾಯಿತು ?

Sri H. M. CHANNABASAPPA.—My submission is that Government are not anxious for any reason to delay in making a statement on important points which the hon. members have raised. We will definitely make a statement either tomorrow or the day after on the particular issue that is exercising the minds of hon. members.

ಶ್ರೀ ಕಾಗೋಡು ತಿಮ್ಮಪ್ಪ.—ಈಗಿನ ಅಧಿವೇಶನ ಮುಗಿಯುವುದರಲ್ಲಿದೆ, ಅಷ್ಟರೊಳಗೆ ಚುನಾವಣೆ ವಿಚಾರ ತಿಳಿಸಬೇಕು.

Mr. DEPUTY SPEAKER.—I have understood your point. I will see that your point is carried to the Minister concerned.

ಶ್ರೀ ಕಾಗೋಡು ತಿಮ್ಮಪ್ಪ.—ಸರಕಾರವಿನ್ನೂ ಈ ವಿಚಾರವನ್ನು ತೀರ್ಮಾನಿಸಿಲ್ಲ, ತೀರ್ಮಾನ ಕೈಕೊಂಡು ತಿಳಿಸುತ್ತೇನೆ ಎಂದು ಹೇಳಿದ್ದರು. ಅದರಂತೆ ಜಾಗ್ರತೆ ತಿಳಿಸಬೇಕು.

Sri H. M. CHANNABASAPPA.—If he has agreed to make a statement, he would certainly make a statement. I am not sure as to what he has said ; but, anyway I request the concerned Minister if he has made any commitment to this House, to stick to that commitment.

Another point I would like to submit is that the Chief Minister after discussing with the concerned officers in regard to Cauvery Waters is busy with the Upper House attending to the discussion of Food and Civil Supplies. Therefore it is not correct to say that the Chief Minister is out of sight. He requested me to be here and therefore I came here. After finishing that he is coming.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಚನ್ನಬಸಪ್ಪನವರು ನನ್ನ ವಿಷಯದ ಬಗ್ಗೆ 15 ದಿವಸದಲ್ಲಿ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಈಗಾಗಲೇ 25 ದಿವಸವಾಯಿತು. ಜನರಲ್ ಹಾಸ್ಪಿಟಲ್ ಮುಂದೆ ಭಾಷಣ ಮಾಡಿದ್ದೇನೆಯೇ, ಇಲ್ಲವೇ ಎನ್ನುವುದಕ್ಕೆ ರಿಪೋರ್ಟ್ ಅನ್ನು 15 ದಿವಸದಲ್ಲಿ ಇಡುತ್ತೇನೆಂದು ಹೇಳಿದರು. ಇನ್ನೂ ಎಂಟು ದಿವಸ ಟೈಂ ಬೇಕಾದರೆ ತೆಗೆದುಕೊಳ್ಳಬಹುದು. ಯಾವಾಗ ಇದರ ಬಗ್ಗೆ ರಿಪೋರ್ಟ್ ಇಡುತ್ತಾರೆಂದು ತಿಳಿಯಬೇಕಾಗಿದೆ.

Sri H. M. CHANNABASAPPA.—He himself is extending the time. Alright, I will make it within a week.

Sri M. S. KRISHNAN.—This morning an assurance was given by the Hon. Speaker that on two issues statement would be made in the evening. If it is not possible to do it, let him make it tomorrow atleast on the Cauvery Water issue. Another issue is the question of electricity being sold to Tamilnadu. If it is to be made tomorrow I have no objection even for that.

Mr. DEPUTY SPEAKER.—It will be done as early as possible. It will be included in the agenda.

Demands for Grants—Demand No. 20A and 22

(Debate continued)

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ನಮ್ಮ ಫಿಷರೀಸ್ ಡಿಪಾರ್ಟಮೆಂಟ್ ಬಗ್ಗೆ ಮಾತನಾಡಬೇಕೋ ಬೇಡವೋ ಎಂದು ನನಗೆ ಅನುಮಾನವಾಗಿದೆ ಇದು ಬಹಳ ಮುಖ್ಯವಾದಂಥ ಖಾತೆ. ನಮ್ಮ ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಹಾಗೂ ರಾಜ್ಯದ ಒಳಪ್ರದೇಶಗಳಲ್ಲಿಯೂ ಕೂಡ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಬಹಳಷ್ಟು ಅವಕಾಶವಿದೆ ಎನ್ನುವುದನ್ನು ಅನೇಕ ಮಂದಿ ತಜ್ಞರು ಅಂಕಿಸಂಖ್ಯೆಗಳ ಮೂಲಕ ತಮ್ಮ ಮುಂದೆ ಇಟ್ಟಿದ್ದಾರೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಫಿಷರೀಸ್ ಡೆವಲಪ್‌ಮೆಂಟ್ ಮಾಡುವುದಕ್ಕೆ, ಮೂರು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಿ; ಅದು ಈಗ ಮುಕ್ತಾಯವಾಗುತ್ತಾ ಬಂದು ಆ ಯೋಜನೆಯಲ್ಲಿ ಎಷ್ಟು ಅಭಿವೃದ್ಧಿಯನ್ನು ಸಾಧಿಸಬೇಕಾಗಿತ್ತೋ ಅಷ್ಟು ಅಭಿವೃದ್ಧಿಯನ್ನು ಸಾಧಿಸಿಲ್ಲ; ಎನ್ನುವುದನ್ನು ತಮ್ಮ ವರದಿಯಲ್ಲಿ ಹಾಗೂ ಎಸ್ಟೀಮೇಟ್ ಕಮಿಟಿಯವರು ಕೊಟ್ಟಿರುವಂಥ ವರದಿಯಲ್ಲಿ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈಗ ಸಮಯ ಹೆಚ್ಚಾಗಿ ಇಲ್ಲದೆ ಇರುವುದರಿಂದ ಇದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಮೆರೀನ್ ಫಿಷರೀಸ್ ಅನ್ನು ಡೆವಲಪ್ ಮಾಡಬೇಕಾದರೆ ಡೀಪ್ ಸೀಯಿಂಗ್ ಫಿಷಿಂಗ್ ಬಗ್ಗೆ ಹೆಚ್ಚಿನ ನಿಗ ಕೊಡಬೇಕು. ಆಳವಾದ ಸಮುದ್ರದಲ್ಲಿ ಮೀನುಗಾರಿಕೆ ನಡೆಸುವುದಕ್ಕೆ ಒಳ್ಳೆಯ ದೋಣಿಗಳು ಟ್ರಾಲರ್ಸ್ ಸಿಕ್ಕುವುದಿಲ್ಲ. ಅವು ಇಲ್ಲದೆ ಇರುವುದರಿಂದ ಮೀನುಗಾರಿಕೆಗೆ ಬೇಕಾದಂಥ ಸ್ಪಿರ್ಟ್ಸ್ ತರಬೇತಿಹೊಂದದೆ ಇರುವುದರಿಂದ ಇದು ನಿಧಾನವಾಗಿದೆ ಎಂದು ಹೇಳಿದ್ದಾರೆ. ಈ ಕಾರಣ ಅಷ್ಟು ಸಮಂಜಸವಾದುದು ಅಲ್ಲ. ಏಕೆಂದರೆ, ನಮ್ಮ ಮೈನೂರು ರಾಜ್ಯದಲ್ಲಿ ಈ ಒಂದು ಕೈಗಾರಿಕೆಯನ್ನು ಬೆಳೆಸುವುದಕ್ಕೆ ಹಣದ ಆಭಾವ ಕಾರಣವಲ್ಲವೆಂದು ನಾನು ಭಾವಿಸುತ್ತೇನೆ. ಅದಕ್ಕೆ ಬೇಕಾದ ಟ್ರಾಲರ್ಸ್‌ಗೆ ತರಬೇತಿ ಹೊಂದಿದ ತಜ್ಞರ ನೆರವನ್ನು ಮೈನೂರಿನವರು ಪಡೆದುಕೊಳ್ಳುವುದಕ್ಕೆ ಪ್ರಯತ್ನ ನಡೆಯದೆ ಇರಲಾರದು. ಇವರ ಬಗ್ಗೆ ಸಾಕಷ್ಟು ಗಮನ ಕೊಟ್ಟಿದ್ದರೆ, ನಮಗೆ ಬೇಕಾದ ಸಹಕಾರವನ್ನು, ತಜ್ಞರ ನೆರವನ್ನು ಕೇಂದ್ರಸರ್ಕಾರದಿಂದ ಪಡೆಯುವುದಕ್ಕೆ ಸಾಧ್ಯವಾಗುತ್ತಿತ್ತು. ಕಳೆದ ವರ್ಷದಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯವನ್ನು ಮೀನುಗಳನ್ನು ರಫ್ತು ಮಾಡುವುದರಿಂದ ಗಳಿಸಿದ್ದೇವೆ. ಈ ವರ್ಷ ಈ ವಿದೇಶಿ ವಿನಿಮಯ ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟಾಗಬಹುದು ಎಂದು ಅಂದಾಜು ಮಾಡಲಾಗಿದೆ. ವರ್ಷದಿಂದ ವರ್ಷಕ್ಕೆ ಹೆಚ್ಚು ವಿದೇಶವಿನಿಮಯ ಗಳಿಸುವುದಕ್ಕೆ ಸಹಾಯಕವಾಗುತ್ತಿರುವ ಈ ಒಂದು ಖಾತೆಗೆ ಕೇಂದ್ರಸರ್ಕಾರದವರು ಅಡ್ಡಿಯನ್ನು ಹಾಕಲಾರರು. ಕೇಂದ್ರದಿಂದ ಅದಷ್ಟು ಹೆಚ್ಚು ಹಣವನ್ನು ಪಡೆದುಕೊಳ್ಳುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಿದರೆ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಫಿಷರೀಸ್ ಡಿಪಾರ್ಟಮೆಂಟನ್ನು ಸ್ವಲ್ಪ ಬಲಪಡಿಸಬೇಕಾಗಿದೆ. ಮುಖ್ಯವಾಗಿ ಇದಕ್ಕಾಗಿ ಒಂದು ಸ್ಪೆಷಲ್ ಸೆಕ್ರೆಟರಿ ಶಾಖೆಯನ್ನು ಆರಂಭ ಮಾಡಿದ್ದಾರೆ, ಈ ಸ್ಪೆಷಲ್ ಸೆಕ್ರೆಟರಿ ಶಾಖೆಯನ್ನು ಕ್ಯಾಬಿನೆಟ್ ರ್ಯಾಂಕಿಗೆ ಸ್ಪೆಷಲ್ ಆಫೀಸರ್ ಮಾಡಿ ಈ ಖಾತೆಯನ್ನು ಇನ್ನಷ್ಟು ಬಲಪಡಿಸಬೇಕು. ಆದ್ದರಿಂದ ಸರ್ಕಾರ ಇದರ ಬಗ್ಗೆ ಹೆಚ್ಚು ಗಮನಕೊಡಬೇಕು. ಈ ರೀತಿ ಮಾಡುವುದರಿಂದ ಆಯಾ ಕಾಲಕ್ಕೆ ಇದರ ಸಮಸ್ಯೆಯನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಸ್ಪೆಷಲ್ ಸೆಕ್ರೆಟರಿಯು ಯಾರೇ ಆಗಿರಲಿ, ಅವರಿಗೆ ಇಂಥ ಒಂದು ಕ್ಯಾಬಿನೆಟ್ ದರ್ಜೆಯ ಪದವಿಯನ್ನು ಕೊಡಬೇಕು. ಕಳೆದ ವರ್ಷ ಫಿಷರೀಸ್ ಡಿಪಾರ್ಟಮೆಂಟಿಗಾಗಿ 25 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ನಮ್ಮಲ್ಲಿ ಮೀನಿನ ಮಾರುಕಟ್ಟೆಯ ವ್ಯವಸ್ಥೆ ಬಹಳ ಕಡಿಮೆ. ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನ ಮೂರು ಸಂಸ್ಥೆಗಳು ನಮ್ಮಲ್ಲಿವೆ. ಈ ಎರಡಾ ಸಂಸ್ಥೆಗಳನ್ನು ತೆಗೆಸಿದ ಪರಿಣಾಮವಾಗಿ ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಪರಂಪರಾಗತವಾಗಿ ಸಾವಿರಾರು ವರ್ಷಗಳಿಂದ ಈ ಮೀನುಗಾರಿಕೆಯ ಕಸಬನ್ನು ಮಾಡುತ್ತಾ ಬಂದಂಥ ಜನ ನಮ್ಮ ಕರಾವಳಿ ಪ್ರದೇಶಗಳಲ್ಲಿ ಸಾವಿರಾರು ಮನೆತನದವರು ಇದ್ದಾರೆ, ಇದರಿಂದ ಇವರಿಗೆ ತೊಂದರೆಯಾಗಿದೆ. ಫಿಷರೀಸ್ ಡೆವಲಪ್‌ಮೆಂಟ್ ಹಾಗೂ ಫಿಷ್ ಮಾರ್ಕೆಟಿಂಗ್ ಫೆಡರೇಷನ್‌ಗೆ ಆರ್ಥಿಕ ಸಹಾಯವನ್ನು ಕೊಟ್ಟು ಮುಂದೆ ಈ